ಓಎಸ್ ನಂ.20-2022

ಡಿ.ಡಬ್ಲ್ಯೂ-1

ದಿನಾಂಕಃ 15-12-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

**<u>ಪಾಟೀ ಸವಾಲುಃ</u>ವಾದಿ ಪರ ಶ್ರೀ ಎನ್ ಆರ್ .ಬಿ ವಕೀಲರಿಂದಃ**

1. ವಾದಿಯ ಮದುವೆಯು ಅಂದಾಜು 2000 ಸಾಲಿನ ಆಸುಪಾಸಿನಲ್ಲಿ ಆಗಿರಬಹುದು ನಿಖರವಾಗಿ ಯಾವ ವರ್ಷದಲ್ಲಿ ಆಗಿರಬಹುದು ಎಂದು ನೆನಪಿಗೆ ಬರುತ್ತಿಲ್ಲ . ಅವರ ವಿವಾಹವನ್ನು ನಮ್ಮ ಅಜ್ಜನ ಮನೆಯಿಂದ ಮಾವನು ಮಾಡಿರುತ್ತಾನೆ . ಖರ್ಚು ವೆಚ್ಚ ನಾವೆ ನೋಡಿ ಕೊಂಡಿರುತ್ತೇವೆ ನಾವು ಅಂದರೆ ನಾನು ಮತ್ತು ನನ್ನ ತಾಯಿ .

2. ನನ್ನ ಅಕ್ಕ ಪದವಿ ಯನ್ನು ಪಡೆದು ಕೊಂಡಿರುತ್ತಾಳೆ ಅವಳ ಪದವಿ ಮುಗಿಸಲು ಖರ್ಚು ವೆಚ್ಚವನ್ನು ನಾನು ಮತ್ತು ನನ್ನ ತಾಯಿ ನೋಡಿಕೊಂಡಿರುತ್ತೆವೆ .

3. ನಾನು 9 ನೆ ತರಗತಿ ವರೆಗೆ ಓದಿರುತ್ತೇನೆ . ಮನೆಯ ಜವಾಬ್ದಾರಿ ಬಿದ್ದುದರಿಂದ ನಾನು ವಿದ್ಯಾಭ್ಯಾಸನ್ನು ಮುಂದುವರೆಸಿಲ್ಲ . ಜವಾಬ್ದಾರಿ ಎಂದರೆ ಮನೆಯ ಕೆಲಸ, ತೋಟದ ಕೆಲಸ ತಾಯಿಯನ್ನು ನೋಡಿಕೊಳ್ಳುವ ಜವಾಬ್ದಾರಿ ನನ್ನ ಮೇಲೆ ಇತ್ತು . ನನ್ನ 15-16 ವರ್ಷದಿಂದ ಸದ್ರಿ ಜವಾಬ್ದಾರಿ ನಾನು ವಹಿಸಿಕೊಂಡಿರುತ್ತೇನೆ . ಈ ಜವಾಬ್ದಾರಿ ವಹಿಸಿಕೊಂಡ ನಂತರದಿಂದ ಕುಟುಬದ ಆಗುಹೋಗುವ ಬಗ್ಗೆ ನನ್ನ ಎಲ್ಲಾ ಮಾಹಿತಿ ನನಗೆ ಇರುತ್ತದೆ ಎಂದರೆ ಸರಿ . ನಾನು ಜವಾಬ್ದಾರಿ ವಹಿಸಿಕೊಂಡಾಗ ನನ್ನ ಕುಟುಂಬದಲ್ಲಿ ನಾವು 3 ಜನ ಇದ್ದೆವು . ಎಂದರೆ ನನನ ತಾಯಿ , ನನ್ನ ತಾಯಿ ನನ್ನ ಅಕ್ಕ ಹಾಗೂ ನಾನು . ನಾನು ಕುಟುಂಬದ ಜವಾಬ್ದಾರಿ ತೆಗದುಕೊಂಡ ನಂತರವೆ ನನ್ನ ಅಕ್ಕ ಮದುವೆಯಾಗಿರುತ್ತಾಳೆ .

4. ಯಾವುದೆ ಕಾಲದಲ್ಲಿ ನಮ್ಮ ಮೂರು ಜನ ಕುಟುಂಬದ ಸದಸ್ಯರಲ್ಲಿ ಆಸ್ತಿಯ ಬಗ್ಗೆ ವಾಂಟಣೆ ಆಗಿದ್ದು ಇಲ್ಲ . ನನ್ನ ತಂದೆಯ ಮೂಲ ಕುಟುಂಬ ಹಾಗೂ ನಾವು 3 ಜನ ಬೇರೆ ಬೇರೆಯಾಗಿ 1995-96 ಸಾಲಸಿನಿಂದ ವಾಸಿಸುತ್ತಾ ಬಂದಿರುತ್ತೇವೆ .

5. ನನ್ನ ತಂದೆ ಧನಂಜಯ ಹೆಗಡೆ ಯವರು ಅಣ್ಣತಮ್ಮಂದಿರು 5 ಜನ ಅದರಲ್ಲಿ ಒಬ್ಬರು ತೀರಿಕೊಂಡಿರುತ್ತಾರೆ . ನಾಲ್ಕು ಜನರು ಇದ್ದರು . 1995 ನೆ ಸಾಲಿನಲ್ಲಿ ನನ್ನ ತಂದೆಯ ತಂದೆ ಜೀವಂತವಾಗಿದ್ದರು . ನನ್ನ ತಾಯಿಗೆ ನನ್ನ ತಂದೆಯ ಮೂಲ ಕುಟುಂಬದೊಂದಿಗೆ ಹೋದಾಣಿಕೆಯಾಗದ ಕಾರಣ ನನ್ನ ತಂದೆಯ ಮೂಲ ಕುಟುಂಬದಿಂದ ನಾವುಗಳು ಬೇರೆಯಾಗಿರುತ್ತೇವೆ . 1995-96 ನೇ ಸಾಲಿನಲ್ಲಿ ಬೇರೆಯಾಗಿದ್ದರ ಬಗ್ಗೆ ವಾಂಟಣಿ ಪತ್ರ ಆಗಿಲ್ಲ . ಆದರೆ ಪಂಚರ ಸಮಕ್ಷಮದಲ್ಲಿ ಬಾಯಿ ಮಾತಿನ ಮುಖಾಂತರ ಬೇರೆ ಯಾಗಿರುತ್ತೇವೆ . ಸದ್ರಿ ಪಂಚರ ಸಮಕ್ಷಮ ದಲ್ಲಿ ಬಾಯಿ ಮಾತಿನ ಮುಖಾಂತರ ಬೇರೆಯಾದಂತೆ ನಮ್ಮ ತಂದೆಯ ಕವರಿನವರಿಗೆ ಯಾವ ಯಾವ ಸರ್ವೆ ನಂಬರಗಳು ಹೋಗಿರುತ್ತವೆ ಎಂದು ನನಗೆ ಗೊತ್ತಿಲ್ಲ . ನಿಮ್ಮ ತಾಬಾದಲ್ಲಿ ಈಗ ಅ ಪರಿಶಿಷ್ಟದಲ್ಲಿ ಕಾಣಿಸಿದ 1 ಮತ್ತು 2 ಆಸ್ತಿಗಳು ಇರುತ್ತವೆ ಎಂದರೆ ಸರಿ . ಈ ಆಸ್ತಿಗಳು 1995-96 ನೇ ಸಾಲಿನಿಂದಲೂ ನಮ್ಮ ಕಬ್ಜಾ ಬೋಗಟೆಯಲ್ಲಿ ಇರುತ್ತವೆ ಎಂದರೆ ಸರಿ . ಈ ಆಸ್ತಿಗಳು 1995-96 ನೆ ಸಾಲಿನಲ್ಲಿ ಪಂಚರ ಸಮಕ್ಷಮದಲ್ಲಿ ನಿಮಗೆ ಕೊಟ್ಟಂತಹ ಆಸ್ತಿಗಳು ಎಂದರೆ ಸರಿ. ಸದ್ರಿ ಅಪರಿಶಿಷ್ಟದ 2 ಅಸ್ತಿಗಳಿಗೆ ಲಗತ್ತಾಗಿ ಬೆಟ್ಟ ಕೂಡ ಇರುತ್ತದೆ ಎಂದರೆ ಹೌದು . ಈ ಬೆಟ್ಟಗಳು ಪೂರ್ವ ಮತ್ತು ಉತ್ತರ ದಿಕ್ಕಿಗೆ ಇರುತ್ತವೆ ಎಂದರೆ ಅವು ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಇರಬಹುದು . ಈ ಸೋಪ್ಪಿನ ಬೆಟ್ಟದಲ್ಲಿ ನಾನು ಬಾಗಾಯತ ವಾಗಿ ಅದನ್ನು ವಿಸ್ತರಿಸಿರುತ್ತೇನೆ . ಅದು 5 ಎಕರೆ ಇರುತ್ತದೆ ಎಂದರೆ 1 ರಿಂದ ಒಂದು ಕಾಲು ಎಕರೆ ಅಜಮಾಸು ಇರಬಹುದು . ನಾನು ದಾವಾ ಪತ್ರ ಓದಿರುತ್ತೇನೆ . ವಾದ ಪತ್ರದಲ್ಲಿ ನಿಮ್ಮ ಸಹೋದರಿ ವಾದಿಯು 5 ಎಕರೆ ಪ್ರದೇಶದ ವರೆಗೆ ಬಾಗಾಯತ ಜಮೀನ ನ್ನು ಮಾಡಲಾಗಿದೆ ಎಂದು ಹೇಳಿರುತ್ತಾರೆ ಎಂದರೆ ಸರಿ . ಈ ರೀತಿ ಹೇಳಿದ್ದನ್ನು ನೀವು ನಿಮ್ಮ ತಕರಾರಿನಲ್ಲಿ ಅಲ್ಲಗಲೆದಿಲ್ಲ ಎಂದರೆ ಆಗ ಅದು ನನಗೆ ನೆನಪಿಲ್ಲದಿರಬಹುದು ಸದ್ರಿ ಬಾಗಾಯತ 1 ರಿಂದ ಒಂದು ಕಾಲು ಎಕರೆ ಇರಬಹುದು ಎಂದು ನೀವು ನಿಮ್ಮ ತಕರಾರಿನಲ್ಲಿ ಹೇಳಿಲ್ಲ ಎಂದರೆ ಸರಿ . ಸದ್ರಿ ಬಾಗಾಯತ ನಲ್ಲಿ ಅಡಿಕೆ , ತೆಂಗು , ಬಾಳೆಯನ್ನು ಬೆಳೆಸಲಾಗಿರುತ್ತದೆ ಎಂದರೆ ಅಡಿಕೆ ಮಾತ್ರ ಬೆಳೆಸಲಾಗಿದೆ . ಈ ಬೆಳವಣಿಗೆ 1995 ರ ನಂತರ ಅಗಿಲ್ಲ ಈಗ 6-7 ವರ್ಷದಲ್ಲಿ ಆಗಿರುತ್ತದೆ . ಈ ಒತ್ತುವರಿಯಾದ ಬೆಟ್ಟ ಸರ್ವೆ ನಂಬರಿನ ಸುತ್ತಲು ಪ್ರಾಣಿಗಳು ಬರಬಾರದು ಎಂದು ಅಗಳವನ್ನು ತೆಗೆಯಲಾಗಿರುತ್ತದೆ ಎಂದರೆ ಇಲ್ಲ .

ಪ್ರಾಣಿ ಗಳು ಬರದೆ ಇದ್ದ ರೀತಿಯಲ್ಲಿ ಯಾವ ವ್ಯವಸ್ಥೆ ಮಾಡಿದ್ದೀರಿ ಎಂದರೆ ಯಾವ ವ್ಯವಸ್ಥೆ ಇಲ್ಲ . ಪ್ರಾಣಿ ಗಳು ಬರುತ್ತವೆ ಇವೆ . ಕಾಡು ಪ್ರಾಣಿಗಳು ಮತ್ತು ದನಗಳು ಬಂದರೆ ತೋಟ ಏನಾಗಬಹುದು ಎಂದರೆ ದನಗಳು ಬರುವುದಿಲ್ಲ ಕಾಡು ಪ್ರಾಣಿಗಳು ಬರುತ್ತವೆ ನಾವು ತೋಟ ಸರಿ ಮಾಡುತ್ತಲೆ ಇರುತ್ತೇವೆ .

6. ನೀವು 2004 ನೇ ಇಸ್ವಿಯಲ್ಲಿ ಸಿವಿಲ್ ಜಡ್ಜ ಕೋರ್ಟ ಕಾರವಾರ ನ್ಯಾಯಾಲಯದಲ್ಲಿ ನಿಮ್ಮ ಅಜ್ಜ ಹಾಗೂ ಚಿಕ್ಕಪ್ಪ ಮತ್ತು ತಾಯಿ ಹಾಗೂ ಅಕ್ಕ ನ ವಿರುದ್ದ ವಾಂಟಣಿ ದಾವೆ ಮಾಡಿದ್ದೀರಿ ಎಂದರೆ ಅದರ ಬಗ್ಗೆ ತಾಯಿಗೆ ಗೊತ್ತು ನನಗೆ ಮಾಹಿತಿ ಇಲ್ಲ ಅದನು ತಾಯಿ ಹೇಳಿ ಮಾಡಿಸಿದ್ದು .. ಅಂದರೆ ನಿಮ್ಮ ತಾಯಿ ಅವರ ಮೇಲೆಯೇ ಕೇಸ ನ್ನು ಹಾಕಿಸಿ ಕೊಂಡಿರುತ್ತಾರಾ ಎಂದರೆ ನನಗೆ ಮಾಹಿತಿ ಇಲ್ಲ . ದಾವೆಯು ಕೊನೆಯಲ್ಲಿ ಏನಾಯಿತು ಎಂದು ನನಗೆ ಮಾಹಿತಿ ಇಲ್ಲ. ಅದರಲ್ಲಿ ನ್ಯಾಯಾಲಯದಲ್ಲಿ ನಿಮ್ಮ ವಿಚಾರಣೆ ಆಗಿತ್ತು ಎಂದರೆ ನನಗೆ ನೆನಪಿಲ್ಲ . ಆ ದಾವೆಯು ಕೊನೆಯಲ್ಲಿ ನಿಖಾಲೆಯಾಯಿತೊ ಇಲ್ಲವೊ ಎಂದು ನನಗೆ ಮಾಹಿತಿ ಇಲ್ಲ . ಸಾಕ್ಷಿಗೆ ನಿಪಿ–13 ರ ದಾಖಲಾತಿ ತೋರಿಸಲಾಗಿ ಅದರಲ್ಲಿ ವಾದಿ ಎಂದು ನಿಮ್ಮ ಸಹಿ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ . ಸದ್ರಿ ನಿಪಿ–13 ರ ದಾಖಲಾತಿ ಕನ್ನಡದಲ್ಲಿ ಇರುತ್ತದೆ ಎಂದರೆ ಸರಿ . ಅದರಂತೆ ಆ ದಾವೆಯು ರಾಜಿ ಆಗಿರುತ್ತದೆ ಎಂದರೆ ನನಗೆ ಯಾವುದು ನೆನಪಿಗೆ ಬರುತ್ತಿಲ್ಲ ಆ ಸಮಯದಲ್ಲಿ ನಾನು ನನ್ನ ತಾಯಿ ಹೇಳಿದಂತೆ ನಡೆದು ಕೊಂಡಿರುತ್ತೇನೆ . ಆ ಸಮಯದಲ್ಲಿ ಆ ದಾವೆಯನ್ನು ನೀವು ನಿಮ್ಮ ವಕೀಲರ ಮುಖಾಂತರ ಹಾಜರಾಗಿರುತ್ತೀರಿ ಎಂದರೆ ಇರಬಹುದು ನನಗೆ ನೆನಪಿಲ್ಲ . ನಿಪಿ–13 ದಾಖಲಾತಿಯಲ್ಲಿ ತಾಯಿುಯ ಹೇಳಿಕೆಯಂತೆ ನಡೆದು ಕೊಳ್ಳುತ್ತಿದ್ದೇನೆ ಎಂದು ಬರೆಸಿಲ್ಲ ಎಂದರೆ ಸರಿ . ಸಾಕ್ಷಿ ಪುನಃ ಆ ಸಮಯದಲ್ಲಿ ನನ್ನ ತಾಯಿಯು ಹೇಳಿದಂತೆ ನಾನು ನಡೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ .

7. ಈ ದಾವೆಯಲ್ಲಿ ನಿಮ್ಮ ಅಕ್ಕ rejoinder ಹಾಕುವ ಮೂಲಕ ಈ ಎಲ್ಲಾ ವಿಷಯಗಳನ್ನು ಹೇಳಿರುತ್ತಾರೆ ಎಂದರೆ ಹೇಳಿರಬಹುದು ನನಗೆ ಅರ್ಥಾವಾಗದೆ ಇರಬಹುದು . ನಿಮ್ಮ ವಕೀಲರು ನಿಮ್ಮ ಅಕ್ಕ ಹಾಕಿದ rejoinder ವನ್ನು ಓದಿ ಹೇಳಲಿಲ್ಲವಾ ಎಂದರೆ ಓದಿ ಹೇಳಿರಬಹುದು ನನಗೆ ಅರ್ಥವಾಗದೆ ಇದ್ದಾಗ ಅದನ್ನು ಹೇಗೆ ಅರ್ಥ ಮಾಡಿ ಕೊಳ್ಳಲಿ . ನಿಮ್ಮ ಅಕ್ಕ ಹಾಕಿದ ವಾದ ಪತ್ರ ವು ನಿಮಗೆ ಅರ್ಥ ವಾಗಿರುತ್ತದೊ ಎಂದರೆ ಹೌದು ಅರ್ಥವಾಗಿರುತ್ತದೆ . ನೀವು ಉದಾಹರಣೆ ಹಾಕಿದ ನಂತರ ನಿಮ್ಮ ಅಕ್ಕ rejoinder ಹಾಕಿರುತ್ತಾರೆ

ಅದರಲ್ಲಿ ಈ ಎಲ್ಲಾ ವಿಷಯವನ್ನು ಹೇಳಿರುತ್ತಾರೆ ಎಂದರೆ ಇರಬಹುದು . ಅದನ್ನು ನಿಮ್ಮ ವಕೀಲರ ಮೂಲಕ ನೀವು ಕೇಳಿ ತಿಳಿದು ಕೊಂಡಿರುತ್ತಿರಿ ಎಂದರೆ ವಕಿಲರು ಹೇಳಿರುತ್ತಾರೆ . ನಿಮ್ಮ ಅಕ್ಕ rejoinder ನಲ್ಲಿ ಹೇಳಿದ್ದಕ್ಕೆ ನಿಮ್ಮ ತಾಯಿ ಹೇಳಿದ್ದಕ್ಕೆ ನಾನು ಹಾಕಿದ್ದು ಎಂದು ನೀವು ವಿವರಣೆ ಕೊಟ್ಟಿರುತ್ತಿರಾ ಎಂದರೆ ಇಲ್ಲ . ಆ ರೀತಿಯಾದ ವಿವರಣೆ ಕೊಡಲು ನಿಮಗೆ ತೊಂದರೆ ಇರಲಿಲ್ಲ ಎಂದರೆ ಸರಿ . ತಾಯಿ ಮಾತನ್ನು ಕೇಳಿ ಈ ಎಲ್ಲಾ ಮಾಡಿದ್ದು ಎಂದು ನೀವು ಸುಳ್ಳು ಹೇಳುತ್ತಿದ್ದು ಎಲ್ಲಾವನ್ನು ನೀವು ನಿಮ್ಮ ಸ್ವಇಚ್ಚೆ ಯಿಂದ ಮಾಡಿದ್ದು ಎಂದರೆ ಸರಿಯಲ್ಲ . ಆ ರೀತಿಯಾದ ರಾಜಿ ಅರ್ಜಿಯನ್ನು ನಿಮ್ಮ ತಾಯಿ ಮುಖಾಂತರ ಹೇಳಿ ಮಾಡಿಸಿದ್ದಾ ಎಂದರೆ ಹೌದು . ಅದನ್ನು ನೀನು ಓದಿ ನೋಡಿ ಸಹಿ ಮಾಡಿದ್ದು ಇರತ್ತುದೆ ಎಂದರೆ ಇರಬಹುದು ,ಆ ರಾಜಿ ಅರ್ಜಿಗೆ ಈಗ ನನ್ನ ತಕರಾರು ಇರುತ್ತದೆ . ಈ ದಾವೆಯ ಎಲ್ಲಾ ಕಾಗದ ಪತ್ರಗಳು ಮತ್ತು ರಾಜಿ ಅರ್ಜಿಯಲ್ಲಿ ಕಾಣಿಸಿರುವ ಎಲ್ಲಾ ವಿಷಯಗಳು ನನ್ನ ವಿರುದ್ಧ ಇರುತ್ತದೆ . ಎಲ್ಲವೂ ಕೂಡ ನನ್ನ ವಿರುದ್ಧ ವಾಗಿರುತ್ತದೆ ಎಂದು ನಿವೇನಾದರೂ ನ್ಯಾಯಾಲಯದಲ್ಲಿ ಕ್ರಮ ಜರುಗಿಸಿರುತ್ತಿರಾ ಎಂದರೆ ಇಲ್ಲ ಮತ್ತು ಕ್ರಮಜರುಗಿಸುವವರಿದ್ದೀರಾ ಎಂದರೆ ವಿಚಾರ ಮಾಡಬೇಕು . ಈ ರೀತಿಯಾಗಿ ನೀವು ನ್ಯಾಯಾಲಯದಲ್ಲಿ ಕ್ರಮ ಜರುಗಿಸದೆ ಇರುವ ಕಾರಣ ಅವುಗಳೆಲ್ಲವೂ ಸರಿಯಾಗಿದ ಕಾರಣ ಯಾವುದೆ ಕಾನೂನಿನ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ.

( ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಕಾಲಾವಕಾಶ ನೀಡಲಾಯಿತು .)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ.